## 12

# ನಿಯಮಿತಿಗೊಳಿಸುವ ಮತ್ತು ಸ್ವತಂತ್ರ ನೀಡುವ: ಯೇಸುವಿನ ಅಧಿಕಾರ

ಪ್ರಾಯೋಗಿಕವಾಗಿ ಕ್ರಿಯೆ ನಡಿಸುವ ಯೇಸುವಿನ ಅಧಿಕಾರದ ಕುರಿತಾಗಿ? ಎರಡು ಉದಾಹರಣೆಗಳನ್ನು ಗಮನಿಸುವ.

ಪ್ರಥಮವಾಗಿ, ವೈದ್ಯರು ಔಷದಿಯನ್ನು ಬರೆದು ತಿಳಿಸುವ ವಿಷಯವನ್ನು ನೋಡುವಾಗ ಯಾವ ಯೋಚನೆ ಬರುತ್ತದೆ. ರೋಗಿಗೆ, ರೋಗದ ಸೊಂಕು ಉಂಟಾಗಿದ್ದರೆ, ವೈದ್ಯರು ಆ್ಯಂಟಿಬಯಾಟ್‌ಕ್, ಅಥವಾ ಪೆನ್ಸಿಲಿನ್ ನೀಡುವರು. ರೋಗಿಯು ಅದನ್ನು ಔಷದಿ ನೀಡುವವನಿಗೆ ತೋಲಿಸುವಾಗ, ಅವನಿಗೆ ಪೆನ್ಸಿಲಿನ್‌ಗೆ ಬದಲಾಗಿ ಬೇರೆ ಯಾವುದೇ ಔಷದಿಯನ್ನು ನೀಡಲಾಗುವದಿಲ್ಲ. ರೋಗಿಗೆ ಅನಗತ್ಯವಿರುವ ಎಲ್ಲಾ ಔಷದಿಗಳನ್ನು ವೈದ್ಯರು ಬರೆದು ಕೊಡುವದಿಲ್ಲ. ಅದರ ಬದಲಾಗಿ, ಅವರು ನಿರ್ಧರಿಸಿದ ಔಷದಿಯನ್ನು ಹೊರತು ಪಡಿಸಿ, ಇತರೆ ಎಲ್ಲಾ ಔಷದಿಗಳು ಅನಗತ್ಯವಾಗುತ್ತವೆ. ಔಷದಿ ನೀಡುವವನು, ವೈದ್ಯರು ತಿಳಿಸಿರುವದನ್ನೆ ಹೊರತು ಬೇರೆ ಔಷದಿಯನ್ನು ನೀಡಲಾರನು.

ಔಷದಿ ನೀಡುವವನು, ಔಷದಿಯ ಚೀಟಿಯನ್ನು ಬರೆಯಬಾರದು ಎಂಬ ನಿರ್ಬಂಧವಿಲ್ಲ. ಅವನಿಗೆ ಪೆನ್ಸಿಲಿನ್‌ನಲ್ಲಿ ಯಾವ ಕಂಪನಿಯ ಔಷದಿಯನ್ನು ನೀಡಬೇಕೆಂಬ ಆಯ್ಕೆ ಇರುತ್ತದೆ. ಅವನಿಗೆ ಮತ್ತು ಬರುವ ಔಷದಿಯನ್ನು ನೀಡುವ ಅಧಿಕಾರವಿರುವದಿಲ್ಲ, ಆ್ಯಂಟಿಬಯಾಟ್‌ಕ್‌ಗೆ ಬದಲಾಗಿ ಯಾವುದನ್ನು ನೀಡಬಾರದು ಎಂಬ ನಿರ್ಭಂಧವಿದೆ.

ಎರಡನೆಯ ಉದಾಹರಣೆಯನ್ನು ಗಮನಿಸೋಣ. ನನ್ನ ಕಾರನು ಮೆಕಾನಿಕನ ಬಳಿಗೆ ತೆಗೆದು ಕೊಂಡುಹೋಗಿ, ಅದನ್ನು ಸರಿಯಾಗಿ ಕ್ರಮ ಪಡಿಸು ಎಂದು ಹೇಳುವೆನು. ನಾನು ಹಿಂದಿರುಗುವಾಗ ನನ್ನ ರಶೀದಿಯಲ್ಲಿ ಟ್ರಾನ್ಸ್‌ಮಿಶನ್ನಿಗೆ ಕ್ರಯವನ್ನು ಬರೆದಿದ್ದರೆ, ನಾನು ಆ ಹಣವನ್ನು ಸಂದಾಯಮಾಡಬೇಕೆ? ಇಲ್ಲ. ಯಾಕಾಗಬಾರದು? ಸಂಪೂರ್ಣ ಕ್ರಮಪಡಿಸುವಿಕೆ ಟ್ರಾನ್ಸ್‌ಮಿಶನನ್ನು ಒಳಗೊಂಡಿರುವದಿಲ್ಲ. ಆ ರಶೀಧಿಯ ಬಗ್ಗೆ ಮೆಕಾನಿಕನು ವಾದ ಮಾಡುವುದಾದರೆ? ಆ ಟ್ರಾನ್ ಮಿಶನ್ನಿನ ಕೆಲಸವು ಖರ್ಚಿನದಾಗಿರುತ್ತದೆ. ಅವನ ಕ್ರಿಯೆಯನ್ನು ಸಾಭೀತುಪಡಿಸುವದಕ್ಕೆ, ಅದರ ಖರ್ಚನ್ನು ನನ್ನಿಂದ ಬಯಸುತ್ತಾನೆ. ಅದು ಆ ಪರಿಸ್ಥಿತಿಯನ್ನು ಬದಲಿಸಲು ಸಾಧ್ಯವೇ? ಎಂದಿಗೂ ಇಲ್ಲ. ನಾನು ಅವನಿಗೆ ಸಂಪೂರ್ಣವಾಗಿ ಕ್ರಮಪಡಿಸು ಎಂದು ತಿಳಿಸಿದ್ದೆ, ಅದು ಅವನು ಮಾಡಬೇಕಾದ ಕೆಲಸವನ್ನು ಮಾತ್ರ ಮಾಡಬೇಕೆಂಬ, ಸಲಹೆಯಾಗಿತ್ತು, ಅವನು ನನ್ನ ಟ್ರಾನ್ಸ್‌ಮಿಶನ್‌ನನ್ನು ಬದಲಾಯಿಸುವ ಕಾರ್ಯಮಾಡಬಾರದಿತ್ತು ಅಥವಾ ನನ್ನ ಅಪ್ಪಣೆ ಇಲ್ಲದೆ ಬೇರೆ ಯಾವ ಭಾಗಗಳನ್ನು ಬದಲಾಯಿಸಬಾರದಿತ್ತು.

ಅವನು ನನ್ನ ಕಾರಿನ ಸ್ಪಾರ್ಕ್ ಪ್ಲಗನ್ನು ಬದಲಾಯಿಸಿದನು ಎಂದು ಅವನನ್ನು ನಾನು ದೂರುವುದಾದರೆ? ಈ ಸ್ಪಾರ್ಕ್‌ಪ್ಲಗಿಗೆ ಯಾಕೆ ನೀನು ಹಣವನ್ನು ಕೇಳುವಿ ಎಂದು ಮೆಕಾನಿಕನಿಗೆ ನಾನು ಕೇಳಿದರೆ, "ನಾನು ಕಾರಿನ ಬಗ್ಗೆ ಏನು ತಿಳಿದವನಲ್ಲ ಮತ್ತು ಅವನನ್ನು ನಾನು ಮೋಸಪಡಿಸುತ್ತಿರುವೆನು? ಎಂದು ತಿಳಿಯುವನು ಯಾಕೆಂದರೆ ನನ್ನ ವಾಹನವನ್ನು ಕ್ರಮಪಡಿಸು ಎಂದರೆ, ಸ್ಪಾರ್ಕ್‌ಪ್ಲಗ್ಗನ್ನು ಅವನು ಬದಲಿಸಬೇಕು." ಯಾವುದೇ ಮೆಕಾನಿಕನು ಇದನ್ನು ಮಾಡುವನು. ಏಕೆ? ಯಾಕಂದರೆ ಆ ಕೆಲಸ ಅಗತ್ಯವಾಗಿರುತ್ತದೆ, ಕ್ರಮಪಡಿಸು

ಎಂದರೆ ಸ್ಪಾರ್ಕ್‌ಪ್ಲಗ್ಗನ್ನು ಕ್ರಮಪಡಿಸು ಎಂಬುದಾಗಿರುತ್ತದೆ.

ಈ ಎರಡು ಉದಾಹರಣೆಗಳಲ್ಲಿ ಒಂದೇ ಸಮನಾದ ಮತ್ತು ಕೆಲವು ವ್ಯತ್ಯಾಸಗಳನ್ನು ಗಮನಿಸುತ್ತೇವೆ. ಎರಡೂ ಉದಾಹರಣೆಗಳಲ್ಲಿ *ನಿರ್ದಿಷ್ಟವಾದ* ಅಧಿಕಾರವಿದೆ. ಆ್ಯಂಟಿಬಯಾಟಿಕ್‌ಗೆ ಬದಲಾಗಿ, ರಕ್ತದೂತ್ತಡದ ಔಷದಿಯನ್ನು ಔಷದ ನೀಡುವವನು, ನೀಡಬಾರದು. ಕಾರನ್ನು ಕ್ರಮಪಡಿಸಲು ಮೆಕಾನಿಕನು ಟ್ರಾನ್ಸ್ ಮಿಷನನ್ನು ಬದಲಾಯಿಸಬಾರದು. ಹೇಗೂ ಈ ಎರಡು ಘಟನೆಗಳಲ್ಲೂ, ಅಧಿಕಾರದ ಸ್ವಾತಂತ್ರವನ್ನು ಗಮನಿಸುತ್ತೇವೆ. ವೈದ್ಯನು ಔಷದಿಯ ಹೆಸರನ್ನು ಬರೆಯುವಾಗ, ಯಾವ ಕಂಪನಿಯದು ಎಂದು ತಿಳಿಸಿರುವದಿಲ್ಲ, ಔಷದಿ ನೀಡುವವನು ವಿವಿಧ ಕಂಪನಿಯ ಮಾದರಿಯನ್ನು ಆಯ್ಕೆ ಮಾಡಲು ಸ್ವಾತಂತ್ರ ಹೊಂದಿರುವನು, ಅದೇ ರೀತಿಯಲ್ಲಿ ಮೆಕಾನಿಕನು ಸ್ಪಾರ್ಕ್‌ಪ್ಲಗ್ಗನ್ನು ಬದಲಾಯಿಸುವ ಸ್ವಾತಂತ್ರವನ್ನು ಹೊಂದಿರುವನು ಸಾಮಾನ್ಯವಾದ ಸಲಹೆಯು, ನಿರ್ದಿಷ್ಟ ವಾದ ಕ್ರಿಯೆಯನ್ನು ಹೊಂದಿರುತ್ತದೆ.

ಕರ್ತನ ಅಧಿಕಾರವು ಸಹ, ಪ್ರತಿದಿನ ನಮ್ಮ ಜೀವಿತದಲ್ಲಿ ಈ ರೀತಿಯ ಕಾರ್ಯವನ್ನು ಮಾಡುತ್ತದೆ. ಕೆಲವು ಸಾರಿ, ವೈದ್ಯರು ಕೆಲವು ಮಾದರಿಯ ಪೆನ್ಸಿಲಿನ್‌ನನ್ನು ನಮೂದಿಸಿದ ಹಾಗಿರುತ್ತದೆ. ಕೆಲವು ಸಾರಿ ದೇವರು ನಿರ್ದಿಷ್ಟವಾದದ್ದನ್ನು ತಿಳಿಸಿ, ಆಯ್ಕೆಗೆ ಅವಕಾಶವನ್ನು ನೀಡುವದಿಲ್ಲ, ಅನಗತ್ಯವಾದ ಔಷದಿಯನ್ನು ವೈದ್ಯನು ನಮೂದಿಸಬಾರದೆಂದು, ಔಷದಿ ನೀಡುವವನು ಬಯಸುವಂತೆ, ನಾವು ಮಾಡಬಾರದ ಸಂಗತಿಗಳನ್ನು ದೇವರು ತಿಳಿಸುವ ಅಗತ್ಯವಿರುವದಿಲ್ಲ. ನಾವು ಏನು ಮಾಡಬೇಕೆಂದು ತಿಳಿಸುವಲ್ಲಿ, ದೇವರು, ಇತರೆ ಅನಗತ್ಯ ಸಂಗತಿಗಳನ್ನು ದೇವರು ತೆಗೆದು ಹಾಕಿರಬಹುದು.

ಕ್ರಮಪಡಿಸು ಎಂದು ಹೇಳಿದಂತೆ, ಕೆಲವು ಆಜ್ಞೆಗಳಿರುತ್ತವೆ, ವಿಸ್ತಾರವಾದ ಸಲಹೆಗಳು ಅಧಿಕಾರವನ್ನು ಸೂಚಿಸಿ, ಅಪ್ಪಣೆ ಮಾಡದಂಥ ಕಾರ್ಯಗಳನ್ನು ಮಾಡಿಸುತ್ತದೆ. ಕೆಲವು ಕ್ಷೇತ್ರ ಗಳಲ್ಲಿ, ನಾವು ಸಾಧಿಸುವ ಹಕ್ಕು ಇರುತ್ತದೆ, ಅದನ್ನು ಒಂದು ವೇಳೆ ಬೈಬಲಿನಲ್ಲಿ ತಿಳಿಸದೇ ಇರಬಹುದು.[1] ಗೂಡವಾಗಿರುವ ಅಧಿಕಾರವನ್ನು ಅನುಸರಿಸುವಾಗ, ನಾವು ಕೊಲೊಸ್ಸೆ 3:17 ಯಲ್ಲಿರುವ ಉಪದೇಶವನ್ನು ಗಮನಿಸಬೇಕು: "ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ."

ದೇವರ ಸಲಹೆಗಳ ಕುರಿತಾಗಿ ಕೆಲವು ವಿಷಯಗಳನ್ನು ನೋಡುವ ನಿರ್ಬಂಧದ ಹಾಗೂ ಸ್ವತಂತ್ರಪಡಿಸುವ, ಕರ್ತನ ಅಧಿಕಾರದ ತಿಳುವಳಿಕೆಗಳನ್ನು ಗಮನಿಸುವ.

## ಮೌನದಿಂದ ಉಂಟಾಗುವ ಸಮಂಜಸವಾದ ಪರಿಜ್ಞಾನದ, ಬೈಬಲಿನ ಉದಾಹರಣೆ

ಇಬ್ರಿಯ 7:11-14 ಯೇಸುವಿನ ಯಾಜಕತ್ವದ ಕುರಿತು ತಿಳಿಸುತ್ತದೆ, ನಮ್ಮೊಂದಿಗೆ ಪೂರ್ಣ ಅನುಕಂಪ ತೋರುವವನಾಗಿ, ದೇವರಿಗೂ ಮತ್ತು ಮನುಷ್ಯರಿಗೂ ಮಧ್ಯಸ್ತಗಾರನಾಗಿದ್ದಾನೆ (ಇಬ್ರಿಯ 4:4-16; 5:1-3 ನೋಡಿ). ಬರಹಗಾರನು ಯೇಸುವನ್ನು ಮೆಲ್ಕಿಜೆದೇಕನಿಗೆ ಹೋಲಿಸಿದ್ದಾನೆ. ಅವನು ಅಬ್ರಹಾಮನನ್ನು ಆಶೀರ್ವದಿಸಿದನು ಆದಿಕಾಂಡ 14:18-20ಬಿ, ಮತ್ತು ಮೋಶೆಯ ಧರ್ಮಶಾಸ್ತ್ರದ ಯಾಜಕನಿಗಿಂತ, ಯೇಸು ಶ್ರೇಷ್ಟನು ಎಂದು ತಿಳಿಸಲಾಗಿದೆ. ಯಾಕಂದರೆ ಯೇಸು ದೇವರ ಮಾರ್ಗವನ್ನು ತೋರಿಸಿದ್ದರಿಂದ, ಮೋಶೆಯ ಧರ್ಮಶಾಸ್ತ್ರಕ್ಕಿಂತಲೂ ಹೆಚ್ಚಿನವನು ಎಂದು ತೋರ್ಪಡಿಸಲಾಗಿದೆ.

ಮೋಶೆಯ ಧರ್ಮಶಾಸ್ತ್ರದ ಪ್ರಕಾರ, ಯಾಜಕನು, ಲೇವಿಯ ಕುಲದಿಂದ, ಆರೋನನ ವಂಶದಿಂದ ಬಂದವನಾಗಿರಬೇಕಿತ್ತು. ಅವರಲ್ಲಿ ಯಾರದರಲ್ಲೂ ಅರ್ಹತೆ ಇಲ್ಲದಿದ್ದರೆ ಮಾತ್ರ

ಅವರು ಯಾಜಕರಾಗುತ್ತಿರಲಿಲ್ಲ (ಯಾಜಕಕಾಂಡ 21:1-22:9; ಮುಖ್ಯವಾಗಿ 21:16-24), ಆರೋನನ ಕುಟುಂಬದವರು ಮಾತ್ರ ಯಾಜಕರಾಗಬಹುದಿತ್ತು. ಅವರಲ್ಲಿ ಇಂಥವರೇ ಯಾಜಕರಾಗಬೇಕೆಂದು ದೇವರು ನಿರ್ದಿಷ್ಟವಾಗಿ ತಿಳಿಸಲಿಲ್ಲ. ಅವರ ಕುಟುಂಬದಲ್ಲಿ ಯಾಜಕರನ್ನು ಆಯ್ಕೆ ಮಾಡುವ ಸ್ವತಂತ್ರವನ್ನು ಅವರ ಕುಟುಂಬಕ್ಕೆ ಬಿಟ್ಟುಕೊಡಲಾಗಿತ್ತು.

ಹೇಗೂ, ಆರೋನನ ಕುಟುಂಬವನ್ನು ಹೊರತು ಪಡಿಸಿ, ಇತರರ್ಯ್ಯಾರು ಯಾಜಕರಾಗುವ ಅರ್ಹತೆಯನ್ನು ಹೊಂದಿರಲಿಲ್ಲ. ಬೇರೆ ಕುಲದವರು ಯಾಜಕರಾಗಬಾರದು ಎಂದು, ಹಳೇ ಒಡಂಬಡಿಕೆಯು ಹೇಳಿದೆಯೆ? ಇಲ್ಲ, ಲೇವಿಯ ಕುಲದವರು ಮಾತ್ರ ಯಾಜಕರಾಗಬೇಕು ಎಂದು ದೇವರು ತಿಳಿಸಿರುವಲ್ಲಿ, ಇತರರು ಯಾಜಕರಾಗಬಾರದು ಎಂಬ ತತ್ವವು ಅದರಲ್ಲಿ *ಅಡಗಿರುತ್ತದೆ.* ಯಾಜಕತ್ವವು ಲೇವಿಯರಿಗೂ, ಮತ್ತು ಆರೋನನ ಕುಟುಂಬದವರಿಗೆ ಮಾತ್ರ ಸೀಮಿತವಾಗಿತ್ತು. ಬೇರೆ ಯಾರಿಗೂ ಈ ಅಧಿಕಾರವನ್ನು ನೀಡಲಾಗಿರುವದಿಲ್ಲ. ಬರಹಗಾರನು, ದೇವರ ವಾಕ್ಯದ ಅಧಿಕಾರಕ್ಕೆ ಅಧೀನರಾಗಬೇಕೆಂದು ತಿಳಿಸಿ: "ನಮ್ಮ ಕರ್ತನು ಯೆಹೂದ ಕುಲದಲ್ಲಿ ಜನಿಸಿದವನೆಂದು ಪ್ರಸಿದ್ಧವಾಗಿದೆಯಷ್ಟೆ; ಈ ಕುಲದ ವಿಷಯದಲ್ಲಿ ಮೋಶೆಯು ಯಾಜಕರ ಸಂಬಂಧವಾಗಿ ಒಂದು ಮಾತನ್ನಾದರೂ ಹೇಳಲಿಲ್ಲ" (ಇಬ್ರಿಯ 7:14).

## ಸ್ವತಂತ್ರ ಪಡಿಸುವ ಸಲಹೆಗಳ ಕುರಿತ ಬೈಬಲ್ ಉದಾಹರಣೆ

ಸಭೆಗಳ ಕುರಿತಾಗಿ ಯೋಚಿಸಿರಿ, ಯೇಸುವಿನ ಮರಣ, ಸಮಾದಿ, ಹಾಗೂ ಪುನರುತ್ಥಾನವನ್ನು ನೆನಪು ಮಾಡಲು, ವಾರದ ಮೊಲನೆಯ ದಿನ ಆರಾಧನೆಗಾಗಿ, ಸೇರಿ ಬರುತ್ತೇವೆ.[2] ಇಬ್ರಿಯ 10:25ರಲ್ಲಿ "ಸಭೆಯಾಗಿ ಕೂಡಿ ಬರುವದನ್ನು ಬಿಟ್ಟುಬಿಡಬಾರದು" ಎಂದು ಉಪದೇಶಿಸಲಾಗಿದೆ. 1 ಕೊರಿಂಥ 11:23-26ರಲ್ಲಿ ಆತನು ನಮ್ಮನ್ನು ಒಂದು ನೂತನ ವಾದ ಅನ್ಯೋನ್ಯತೆಯ ಸಮೂಹಕ್ಕೆ ಸೇರಿಸಿರುವದರಿಂದ, ಯೇಸುವಿನ ಕಾರ್ಯಗಳನ್ನು ನೆನಪು ಮಾಡಿಕೊಳ್ಳಬೇಕು. 1 ಕೊರಿಂಥ 14:15, 26ರಲ್ಲಿ, ಕರ್ತನ ಬೋಜನದ ಜೊತೆಯಲ್ಲಿ ಆರಾಧನೆಯ ಇತರೆ ಚಟುವಟಿಕೆಗಳನ್ನು ಸೇರಿಸಲಾಗಿದೆ. ಅಪೊಸ್ತಲರಕೃತ್ಯಗಳು 20:7 ಮತ್ತು 1 ಕೊರಿಂಥ 16:2 ಆದಿ ಸಭೆಯು ವಾರದ ಮೊದಲನೆಯ ದಿವಸದಲ್ಲಿ ಅನ್ಯೋನ್ಯತೆಗಾಗಿ ಸೇರಿಬರುತ್ತಿದ್ದರು. ಇದರ ಮುಖಾಂತರ ದೇವ ಜನರು ಆರಾಧನೆಗೆ ಸೇರಿ ಬರಬೇಕು, ಮತ್ತು ಆ ವಾರದ ದಿನದಲ್ಲಿ ಆತನ ಮಗನಾದ ಯೇಸು ಕ್ರಿಸ್ತನು ಮರಣದಿಂದಎದ್ದು ಬಂದಿರುವದನ್ನು ನೆನಪು ಮಾಡಿ ಒಬ್ಬರಿಗೊಬ್ಬರು ಉತ್ತೇಜಿಸಬೇಕು. ಇದನ್ನು ದೇವರು ನಿರ್ದಿಷ್ಟವಾಗಿ ತಿಳಿಸಿದ್ದಾನೆ.

ಅವರು ಸಭೆಯಾಗಿ ಯಾವ ಸ್ಥಳದಲ್ಲಿ ಸೇರಿಬರಬೇಕು? ಯಾವ ಸಮಯಕ್ಕೆ? ಎಷ್ಟು ಸಮಯದವರೆಗೆ? ಹೊಸ ಒಡಂಬಡಿಕೆಯಲ್ಲಿ ಈ ಪ್ರಶ್ನೆಗಳಿರುವದಿಲ್ಲ. ಈ ವಿಷಯಗಳ ಕುರಿತಾಗಿ, ನಿರ್ಧರಿಸಲು ದೇವರು ನಮಗೆ ಸ್ವತಂತ್ರವನ್ನು ನೀಡಿರವನು. ಇದನ್ನು ನಾವು ಮಾಡುವಾಗ, ದೇವರ ಅಧಿಕಾರವನ್ನು ಮೀರದೆ, ಆ ಅಧಿಕಾರಕ್ಕೆ ಇರುವ ಮೇರೆಗಳನ್ನು ಮೀರ ಬಾರದು ವಾರದ ಮೊದಲನೆಯ ದಿವಸ ಸೇರಬೇಕೆಂಬ ವಿಷಯದಲ್ಲಿ ಸಮಯ ಮತ್ತು ಸ್ಥಳದ ವಿಷಯವೂ ಒಳಗೊಂಡಿರುತ್ತದೆ.

ಸಭಾ ಕಟ್ಟಡವನ್ನು ಉಪಯೋಗಿಸುವ ಸಂಬಂಧದ ಪ್ರಶ್ನೆಗಳಿಗೂ ಈ ನಿಯಮ ಗಳು ಅನ್ವಯಿಸುತ್ತವೆ. ಹೊಸ ಒಡಂಬಡಿಕೆಯಲ್ಲಿ ಸಭಾ ಕಟ್ಟಡದ ಕುರಿತಾಗಿ ಏನನ್ನು ಹೇಳಿರುವದಿಲ್ಲ. ಸಹಜವಾಗಿ ಒಂದು ವೇಳೆ ದೇವರು ನಾವು ಸಭೆಯಾಗಿ ಸೇರಬೇಕೆಂದು ಬಯಸಿದರೆ ಆ ಸಭೆಗೆ ಒಂದು ಸ್ಥಳದ ಅಗತ್ಯತೆಯಿರುತ್ತದೆ. ಒಂದು ವೇಳೆ ಸಭೆಯು ಮನೆಯಲ್ಲಿ, ಸ್ವಂತ ಕಟ್ಟಡದಲ್ಲಿ ಅಥವಾ ಬಾಡಿಗೆಯ ಸ್ಥಳದಲ್ಲಿ ಸೇರುವದು. ಅವರ ನಿರ್ಣಯಕ್ಕೆ ಬಿಡಲಾಗಿದೆ. ದೇವರ ಅಧಿಕಾರದಿಂದಲೇ ಸಭೆಯಾಗಿ ಸೇರಿ ಬರಲಾಗುತ್ತದೆ ಆದರೆ ನಿರ್ದಿಷ್ಟ ವಾದ ಸ್ಥಳದ ಬಗ್ಗೆ ದೇವರು ಏನನ್ನು ಹೇಳಿರುವದಿಲ್ಲ.[3]

ಆ ಸ್ಥಳವನ್ನು ಬೈಬಲಿನ ಅಧ್ಯಯನಕ್ಕಾಗಿ ಉಪಯೋಗಿಸಬಹುದೇ? ಪುನಃ ಆದಿ

ಸಭೆಯಲ್ಲಿದ್ದ ವಿಶ್ವಾಸಿಗಳು "ಅವರು ಅಪೊಸ್ತಲರ ಬೋಧನೆಯಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರಕೃತ್ಯಗಳು 2:42ಎ). ಕ್ರೈಸ್ತರು ನಂಬಿಕೆಯಲ್ಲಿ ಅಭಿವೃದ್ಧಿಯಾಗಿ ಸುವಾರ್ತೆಯನ್ನು ಮುಂದುವರಿಸಬೇಕೆಂದು ಅವರಿಗೆ ಉಪದೇಶದ ಅಗತ್ಯತೆಯನ್ನು ತಿಳಿಸಲಾಗಿತ್ತು (ಮತ್ತಾಯ 28:19; ಕೊಲೆಸ್ಸೆ 1:28, 29; ಎಫೆಸ 4:11, 12; 2 ತಿಮೊಥೆ 2:2). ಉಪದೇಶದ ಅಗತ್ಯತೆಯನ್ನು ದೇವರು ಬಯಸುತ್ತಾನೆ. ಅದು ಹೇಗೆ ಮತ್ತು ಎಲ್ಲಿ ಎಂಬುದನ್ನು ತಿಳಿಸಿರುವದಿಲ್ಲ. ವಾರದ ಮೊದಲನೆಯ ದಿವಸದಲ್ಲಿ, ಸಭೆಯ ಕೂಡುವಿಕೆಯ ಸಮಯ ಸರಿಯಾದ ಸಮಯವಾಗಿರುತ್ತದೆ. ಹೇಗೂ, ಬೈಬಲಿನ ಅಧ್ಯಯನವನ್ನು ವಾರದ ಯಾವುದೇ ದಿನದ ಸಾಯಂಕಾಲದ ಸಮಯದಲ್ಲಿ ಮಾಡಬಹುದು (ಅಪೊಸ್ತಲರಕೃತ್ಯಗಳು 2:46).

ಆರಾಧನೆಗೂ ಮತ್ತು ಬೋಧನೆಗೂ ಉಪಯುಕ್ತವಾಗುವ ಕಟ್ಟಡದಲ್ಲಿ ಯಾವ ಯಾವ ಸಂಗತಿಗಳನ್ನು ಹೊಂದಿರಬೇಕು? ಸಭೆಯವರೆಲ್ಲರೂ ಸೇರಿ ಬರುವದಕ್ಕೆ ಒಂದು ದೊಡ್ಡ ಕೊಠಡಿಯ ಅಗತ್ಯವಿದೆಯೇ? ಇತರೆ ತರಗತಿಗಳಿಗೆ ಚಿಕ್ಕ ಕೊಠಡಿಗಳಿರ ಬೇಕೆ? ಆ ಚಿಕ್ಕ ಕೊಠಡಿಗಳಲ್ಲಿ ಮೇಜು ಹಾಗೂ ಕುರ್ಚಿಗಳು, ಕಪ್ಪು ಹಲಗೆ, ಅಥವಾ ಬೋಧಿಸುವ ಪರಿಕರಗಳಿರಬೇಕೆ ಆದಿ ಸಭೆಯವರು ಅನ್ಯೋನ್ಯತೆಯಲ್ಲಿ ಸಂತೋಷಿ ಸಿದಂತೆ ಸಭೆಯು ಅನ್ಯೋನ್ಯತೆಗೆ ಸೇರಿ ಬರಬೇಕೆ (ಅಪೊಸ್ತಲರಕೃತ್ಯಗಳು 2:42, 46)? ಹಾಗಿದ್ದರೆ ಆ ಅನ್ಯೋನ್ಯತೆಯ ಸಮಯವನ್ನು ಸರಳೀಕರಿಸಲು ಆ ಕಟ್ಟಡದಲ್ಲಿ ಅನುಕೂಲತೆಗಳಿರಲಿ? ಉದಾಹರಣೆಗೆ, ಅನ್ಯೋನ್ಯತೆಗೆ, ಸಭೆಗಳಲ್ಲಿ ಆಹಾರವನ್ನು ಪೂರೈಸಲು ಸ್ಥಳದ ಅಗತ್ಯತೆಯಿದೆಯೇ? ಈ ವಿಷಯದಲ್ಲಿ, "ಹೌದು" ಎಂಬುದು ತಾರ್ಕಿಕ ಉತ್ತರವಾಗಿರುತ್ತದೆ. ಇವೆಲ್ಲವನ್ನು ದೇವರು ಅಧಿಕಾರಯುಕ್ತವಾಗಿ ಮಾಡಲು ಅನುಮೋದಿಸಿದ್ದಾನೆ.

## ನಿರ್ಬಂಧಕ್ಕೊಳಗಾದ ಸಲಹೆಗಳ ಕುರಿತಾದ ಬೈಬಲಿನಲ್ಲಿನ ಉದಾಹರಣೆ

ಯೇಸುವಿನ ಮಾದರಿಯ ಸ್ವಭಾವದಂತೆ ವಿಶ್ವಾಸಿಗಳು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂಬ ಅಪ್ಪಣೆಯನ್ನು ಹೊಂದಿರುತ್ತಾರೆ. ನಿಘಂಟಿನಲ್ಲಿ "ದೀಕ್ಷಾಸ್ನಾನ" ಎಂಬ ಪದದ ಅರ್ಥವೇನಂದರೆ ನೀರನ್ನು ಚಿಮುಕಿಸು ಅಥವಾ ಹೊಯ್ಯು ಮತ್ತು ಮುಳುಗಿಸು.[4] ಹೇಗೂ, ದೇವರು ನೀರನ್ನು ಹೋಯ್ಯುವದಕ್ಕೂ ಮತ್ತು ಚಮುಕಿಸುವದಕ್ಕು ದೀಕ್ಷಾ ಸ್ನಾನವೆಂಬುದಾಗಿ ಕರೆದಿರುವದಿಲ್ಲ, ಮುಳುಗಿಸುವ ದೀಕ್ಷಾಸ್ನಾನವನ್ನು ಕರ್ತನು ಅಧಿಕೃತ ಪಡಿಸಿದ್ದಾನೆ. ಹೊಸ ಒಡಂಬಡಿಕೆಯ ವಾಕ್ಯಗಳು ಮುಳುಗಿಸುವ ಹೊರತುಪಡಿಸಿ ಇತರೆ ಪದ್ಧತಿಗಳನ್ನು ನಿಷೇದ ಮಾಡಿರುತ್ತದೆ, ಗ್ರೀಕ್ ವ್ಯಾಖ್ಯಾನವು ಸಹ ಇತರೆ ಪದ್ಧತಿಗಳನ್ನು ನಿರಾಕರಿಸುತ್ತದೆ.

ಮುಳುಗಿಸು "ಬ್ಯಾಪ್ಟಸ್ಡ್" ಎಂಬ ಪದಕ್ಕೆ *ಬ್ಯಾಪ್ಟೈಸೋ* ಎಂದು ಕರೆಯುತ್ತಾರೆ. ಜೋಸೆಫ್ ಕ್ರೈರ್ಸ ಲೇರ್‍ಸಕಾನ್ ಇದನ್ನು "ಪುನಃ ಪುನಃ ಮುಳುಗಿಸು, ಪೂರ್ಣ ಮುಳುಗಿಸು, ಸಂಪೂರ್ಣ ಮುಳುಗಿಸು ... ಮುಳುಗಿಸಲ್ಪಟ್ಟು ಸಿದ್ಧವಾಗು ನೀರಿನಿಂದ ತೊಳೆದು ಶುಭ್ರವಾಗು" ಎಂದು ವಿವರಿಸದೆ.[5] ವಾಲ್ಟರ್ ಬೋವೆರ ಲೆಕ್ಸಕಾನನ ಮೂರನೆಯ ಮುದ್ರಣದಲ್ಲಿ ಈ ಪದದ ಗ್ರೀಕ್ ಅರ್ಥವು "ನೀರಿನೊಳಗೆ ಹಾಕು ಅಥವಾ ನೀರಿನ ಒಳಗಡೆ ಹೋಗು" ಎಂಬುದಾಗಿದೆ.[6] ದೀಕ್ಷಾಸ್ನಾನದ ನಂತರ ಉಂಟಾಗುವ ಕಾರ್ಯಗಳ ಕುರಿತಾಗಿಯೂ ವಾಕ್ಯಗಳಿವೆ. ಅಪೊಸ್ತಲರಕೃತ್ಯಗಳು 8:38 ಇಥಿಯೋಪಿಯಾದ ಕಂಚುಕಿಯು ಮತ್ತು ಫಿಲಿಪ್ಪನು "ಅವರಿಬ್ಬರೂ ನೀರಿನಲ್ಲಿಳಿದರೂ" ಎಂದು ತಿಳಿಸಲಾಗಿದೆ. ರೋಮಾಪುರ 6:3, 4 ಮತ್ತು ಕೊಲೊಸ್ಸೆ 2:11, 12ರಲ್ಲಿ, ಪೌಲನು ದೀಕ್ಷಾಸ್ನಾವನ್ನು ಮರಣ, ಹೂಣುವಿಕೆ ಮತ್ತು ಯೇಸುವಿನ ಪುನರುತ್ಥಾನಕ್ಕೆ ಹೋಲಿಸಿದ್ದಾನೆ.

ಹೊಸ ಒಡಂಬಡಿಕೆಯ ಬರಹಗಾರರು *ಬ್ಯಾಪ್ಟೈಸೋ* ಎಂಬ ಪದಕ್ಕೆ ಮತ್ತು

ಇತರ ವಿದ್ವಾಂಸರು ಸಹ ಅರ್ಥವನ್ನು ನೀಡಿದ್ದಾರೆ. ಕೆಲವರು ಪದಗಳು ವಿಸ್ತಾರವಾದ ಅರ್ಥವನ್ನು ನೀಡುತ್ತವೆ. ಒಂದು ವೇಳೆ ಬರಹಗಾರನು ಚಿಮುಕಿಸುವದರ ಮತ್ತು ನೀರನ್ನು ಹೊಯ್ಯುವ ಕುರಿತು ಮಾತನಾಡಿದ್ದರೆ, ಅವರು *ಪ್ರೋಸ್‌ಚುಸ್* (ಇಬ್ರಿಯ 11:28) ಅಥವಾ *ರ್‍ಯಾಂಟಿಸೋ* (ಇಬ್ರಿಯ 9:13, 19, 21; 10:22; 12:24; 1 ಪೇತ್ರ 1:2). ಎಂಬ ಪದಗಳನ್ನು ಉಪಯೋಗಿಸುತ್ತಿದ್ದರು. ವಸ್ತುವಿನ[7] ಮೇಲಾಗಲಿ, ಅಥವಾ ವ್ಯಕ್ತಿಯ ಮೇಲಾಗಲಿ ದ್ರವವನ್ನು ಚಿಮುಕಿಸುವ ಅಥವಾ ಸುರಿಯುವ ಕ್ರಿಯೆಗೆ ಈ ಎರಡೂ ಪದಗಳನ್ನು ಬಳಸಬಹುದಾಗಿತ್ತು. ಯೇಸುವಿಗೆ ವಿಧೇಯರಾಗುವವರಿಗೆ "ರಕ್ತದಿಂದ ಪ್ರೋಕ್ಷಿಸು" ಎಂಬ ವಾಕ್ಯವು ಸಹ ಇದೆ (1 ಪೇತ್ರ 1:2). ಹೇಗೂ ದೀಕ್ಷಾಸ್ನಾನದ ಕುರಿತು ಈ ಪದಗಳನ್ನು ಕುರಿತು ಉಪಯೋಗಿ ಸಿರುವದಿಲ್ಲ. ಬರಹಗಳಲ್ಲಿ *ಬ್ಯಾಪ್ಟೈಸೋ* ಎಂಬ ಪದವು ಬರುವಾಗ ನೀರಿನಲ್ಲಿ "ಮುಳುಗಿಸು ಅಥವಾ ಧುಮುಕು" ಎಂಬರ್ಥವನ್ನು ನೀಡಲಾಗಿದೆ.

ದೇವರ ಹೊಸ ಒಡಂಬಡಿಕೆಯನ್ನು ಒಪ್ಪುವವರು, ಪೂರ್ವ ಸ್ವಭಾವದಿಂದ, ನೂತನ ಜೀವಿತಕ್ಕೆ ಪರಿವರ್ತನೆಯಾದರು ಎಂಬುದಕ್ಕೆ ಸಾಕ್ಷಿಯಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವರು ಸುವಾರ್ತೆಗೆ ವಿದೇಯರಾಗಿ, ಯೇಸುವಿನ ಮಾದರಿಯಂತೆ ಜನರು ತಮ್ಮ "ಸ್ವಂತ ಪುನರುತ್ಥಾನವನ್ನು ಹೊಂದುತ್ತಾರೆ" (ರೋಮಾಪುರ 6:3-7). "ಮುಳುಗಿಸುವ" ದೀಕ್ಷಾಸ್ನಾನವೇ ದೇವರ ಕ್ರಮವಾಗಿರುತ್ತದೆ. ಇತರೆ ಕ್ರಮಗಳನ್ನು ಆತನು ಹೇಗೂ ನಿಷಿದ್ಧ ಪಡಿಸಿರುವದಿಲ್ಲ, ಆತನು ಈ ಕ್ರಮದ ಕುರಿತಾಗಿ ಅಲ್ಪವಾಗಿ ತಿಳಿಸಿರುವನು, ಮತ್ತು ಸಾಧ್ಯತೆಗಳು ಸಹ ಇವೆ. ಬೇರೆ ವಿಧವನ್ನು ಅನುಸರಿಸುವದು, ದೇವರ ಅಧಿಕೃತ ಹೇಳಿಕೆಗೆ ವ್ಯತಿರಿಕ್ತವಾಗಿರುತ್ತದೆ.

ಸಭೆಯ ಆರಾಧನೆಯಲ್ಲಿ ಉಪಯೋಗಿಸುವ ವಾದ್ಯಗಳಿಗೆ, ಈ ನಿಯಮಗಳನ್ನು ಅಳವಡಿಸಿಕೊಳ್ಳೋಣ. ವಾಧ್ಯಗಳಿಲ್ಲದ ಹಾಡುಗಳ ಕುರಿತು ಮಾತ್ರ ಕಾಪೆಲ್ಲ ಹೊಸ ಒಡಂಬಡಿಕೆಯು ತಿಳಿಸುತ್ತದೆ, ಮೊದಲ ಶತಮಾನದ ಸಭೆಯಲ್ಲಿ ಇತರೆ ಪ್ರಮುಖ ವಾದ ವಾಧ್ಯಗಳು ಇದ್ದವು ಎಂದು ತಿಳಿಯುತ್ತೇವೆ. ಸಭೆಯ ಪ್ರಾರಂಭದಿಂದ ನೂರಾರು ವರ್ಷಗಳವರೆಗೆ ಇದು ಆಚರಣೆಯಲ್ಲಿತ್ತು, ಮುಂದೆ ದೇವರು ವಾದ್ಯಗಳಿಲ್ಲದ ಸಂಗತಿಗಳನ್ನೆ, ಅನುಮೋದಿಸಿದನು. ಇದು ಕೇವಲ ನಿರಂಕುಶವಾಗಿರದೆ, ಜನರು ಆರಾಧನೆಯನ್ನು ಬಹು ಗಂಭೀರವಾಗಿ ಪರಿಗಣಿಸಿ, "ಸತ್ಯದಿಂದಲೂ ಮತ್ತು ಆತ್ಮದಿಂದಲೂ ಆರಾಧನೆ ಮಾಡ ಬೇಕಿತ್ತು" (ಯೆಹಾನ 4:24). ವಾಧ್ಯಗಳ ಮತ್ತು, ಸಂಗೀತಗಳ ಕುರಿತು ಅರಿಯುವದರಿಂದ, ನಾವು ಆರಾಧನೆ ಮಾಡುವ ದೇವರಿಗೆ ಸಮೀಪಸ್ತರಾಗುವೆವು.

## ಮುಕ್ತಾಯ

*ಎಲ್ಲವನ್ನು* ಯೇಸುವಿನ ಅಧಿಕಾರದ ವ್ಯಾಪ್ತಿಯಲ್ಲಿಯೇ ಮಾಡಬೇಕು. ಸಭೆಯಲ್ಲಿ ಪರಿಣಾಮಕಾರಿಯಾದ ನಿರ್ಣಯಗಳನ್ನು ಮಾಡುವ ಮೊದಲು, ನಾವು ವಾಕ್ಯವನ್ನು ಗಂಭೀರವಾಗಿ ಅಭ್ಯಾಸಿಸಬೇಕು. "*ನಾವು* ಏನು ಮಾಡಬಹುದು?" ಎಂಬ ಪ್ರಶ್ನೆಯಲ್ಲ, ಆದರೆ ನಾವು ಮಾಡುವ ಕಾರ್ಯಗಳು, ಯಾವಾಗಲೂ *ದೇವರ* ಅಧಿಕಾರಕ್ಕೆ ಒಳಪಟ್ಟಿದೆಯೇ? ಎಂಬುದು ಪ್ರಮುಖವಾಗಿರುತ್ತದೆ.

ನಮ್ಮ ಎಲ್ಲಾ ಉಪದೇಶಗಳನ್ನು, ಯೇಸುವಿನ ಅಧಿಕಾರದಿಂದಲೇ ಮಾಡಬೇಕು (ಕೊಲೊಸ್ಸೆ 3:17). ಆತನ ಅಧಿಕಾರವು ಕೆಲ ಸಮಯ ಸ್ವತಂತ್ರವಾಗಿರುತ್ತದೆ, ಕೆಲ ಸಮಯ ನಿರ್ಬಂಧಕ್ಕೆ ಒಳಪಟ್ಟಿರುತ್ತದೆ. ನಮ್ಮ ಪ್ರತಿ ದಿನದ ಚಟುವಟಿಕೆಗಳಲ್ಲಿ, ನಿಯಮಗಳನ್ನು ಪಾಲಿಸುವಂತೆ, ಬೈಬಲಿನ ವಿಷಯಗಳಲ್ಲೂ, ದೇವರ ಅಧಿ ನಿಯಮಗಳನ್ನು ಪಾಲಿಸ ಬೇಕು. ನಮ್ಮ ಕ್ರಿಯೆಗಳು, ದೇವರ ಅಧಿಕಾರದಿಂದ ನಡೆಯುತ್ತಿವೆಯೇ, ಅಥವಾ ನಿರ್ಭಂಧಕ್ಕೆ ಒಳಪಟ್ಟಿದೆಯೇ ಎಂದು ತಿಳಿಯಬೇಕು, ಯಾಕೆಂದರೆ ದೇವರು ಕೆಲವನ್ನು ನಿರ್ದಿಷ್ಟವಾಗಿ

ತಿಳಿಸಿರುವನು. ಅದಕ್ಕಿಂತ ಹೆಚ್ಚಿನದು ಅನಗತ್ಯವಾಗಿರುತ್ತದೆ. ದೇವರ ವಾಕ್ಯಗಳಿಗೆ, ಏನನ್ನು ಸೇರಿಸಬಾರದು ಮತ್ತು ಅದರಿಂದ ಏನನ್ನು ತೆಗೆಯಬಾರದು ಎಂಬ ತಾತ್ಪರ್ಯವು ಇದೆ ಆಗಿರುತ್ತದೆ (ನೋಡಿರಿ ಧರ್ಮೋಪದೇಶಕಾಂಡ 4:2; 12:32; ಯೆಹೋಶುವ 1:7; 1 ಕೊರಿಂಥ 4:6; ಪ್ರಕಟನೆ 22:18, 19).

---

ಟಿಪ್ಪಣಿಗಳು

[1]ಗ್ರಂಥಗಳಲ್ಲಿ ದಾಖಲಾಗದ ಕಾರ್ಯಗಳನ್ನು, ಈ ದಿನದ ಸಭೆಗಳಲ್ಲಿ ಜನರು ಮಾಡುತ್ತಿರುವರು ಎಂದು ಪ್ರಖ್ಯಾತಿಗೊಂಡ ಜನರು ತಿಳಿಸಿದ್ದಾರೆ. ಉದಾಹರಣೆಗೆ, ಸಭೆಗಳಲ್ಲಿ ಹಾಡಿನ ಪುಸ್ತಕ ಹಾಗೂ ಪ್ರೊಜೆಕ್ಟರ್‌ಗಳನ್ನು ಜನರು ಬಳಸುತ್ತಾರೆ. ಕೆಲವರು "ಸಭೆ" ಎಂಬ ಕಟ್ಟಡಗಳಲ್ಲಿ ಸೇರಿಬರುತ್ತಾರೆ. ಆರಾಧನೆಗೆ ಇವುಗಳ ಅಗತ್ಯವಿದೆ ಎಂದು ಗ್ರಂಥಗಳು ತಿಳಿಸುವದಿಲ್ಲ, ಇದರ ಸಂಬಂಧವಾಗಿ, ನಾವು ಸಭೆಗೆ ಅನೇಕ ಕಾರ್ಯವನ್ನು ಮಾಡುತ್ತೇವೆ ಎಂದು ಕೆಲವರು ತಿಳಿಸುತ್ತಾರೆ. ದೇವರ ಅಧಿಕಾರಕ್ಕೆ ಒಳಪಟ್ಟಿರುವ ಮತ್ತು ಒಳಪಡದೆ ಇರುವದನ್ನು ಗ್ರಹಿಸಬೇಕು ದೇವರು ಕೆಲವನ್ನು ನಿರ್ಧಿಷ್ಟಗೊಗಳಿಸಿದ್ದರೆ, ನಾವು ಅದನ್ನೆ ಮಾಡಬೇಕು. ಯೋಜನೆಯು ಎಂಥ ಒಳ್ಳೆಯದಾಗಿದ್ದರೂ, ದೇವರು ಹೇಳಿರುವದನ್ನೆ ನಾವು ಮಾಡಬೇಕು. ನಾವು ಆತನ ಮಾರ್ಗದರ್ಶನವನ್ನು ಗ್ರಹಿಸಿಕೊಳ್ಳಬೇಕು (ಮಾಡು ಎಂಬ ಮಾರ್ಗದರ್ಶನ ಮತ್ತು ಈಗಾಗಲೇ ನಡಿದಿರುವ ಸಂಗತಿ) ಕೆಲವರು ಇವೆರಡನ್ನು ಒಂದೇ ಎಂದು ಪರಿಗಣಿಸುತ್ತಾರೆ (see, for example. F. LaGard Smith, *Radical Restoration: A Call for Pure and Simple Christianity* [Nashville: Cotswold Publishing, 2001], 67, 70, 111, 205, 213). ಅನೇಕ ಕಾರ್ಯಗಳು ಈಗಾಗಲೇ ಹೊಸ ಒಡಂಬಡಿಕೆಯಲ್ಲಿ ನಡೆದಿರುತ್ತವೆ (ಕೆಟ್ಟ ಉದಾಹರಣೆಗಳ ಕುರಿತು ಅನನಿಯ ಸಫರಿಯ ಅಪೊಸ್ತಲರಕೃತ್ಯಗಳು 5, ಕೊರಿಂಥ ಸಭೆಯಲ್ಲಿನ ವಿಭಜನೆ 1 ಕೊರಿಂಥ 1, ಸಹೋದರನಿಗೆ ವಿರುದ್ಧವಾಗಿ ಸಹೋದರನೇ ದೂರನ್ನು ಹೇಳುವುದು 1 ಕೊರಿಂಥ 6) ಕೆಲವು ಉತ್ತಮವಾದ ಉದಾಹರಣೆಗಳು ಉಂಟು, ಮುಂದೆ, ನಾವು ಉತ್ತಮವಾದ ಮಾದರಿಯನ್ನು ಅನುಸರಿಸಬೇಕು ಎಂದು ಹೇಳಲಾಗಿದೆ. ಬಹುಶಃ ಬೈಬಲಿನ ಬರಹಗಾರನು ತಿಳಿಸಿರುವಂತೆ ಚಟುವಟಿಕೆಗಳು ನಡೆಯಬೇಕು. ಅದಕ್ಕಾಗಿಯೇ, ನಾವು ಆರಾಧನೆಗೆ ಸೇರುತ್ತೇವೆ, ವಾರದ ಮೊದಲನೆಯ ದಿವಸ ಉತ್ತೇಜನಕ್ಕಾಗಿ ಸೇರಿ ಬರುತ್ತೇವೆ ಆದರೆ ಪರಿಶುದ್ಧವಾದ ಮುದ್ದಿನಿಂದ ಅಭಿನಂದಿಸಬೇಡಿರಿ (2 ಕೊರಿಂಥ 13:12). [2]ಆದಿ ಕ್ರೈಸ್ತರು ಯೆಹೂದ್ಯರಾಗಿದ್ದರು, ದೇವಾಲಯದಲ್ಲಿ, ಎಳನೆಯ ದಿವಸ ಆರಾಧನೆಗಾಗಿ ಸೇರಿ ಬರುತ್ತಿದ್ದರು. ಅದು ಅವರ ಹಿಂದಿನ ಕೆಳೆದು ಹೋದ ದಿವಸಗಳ ಆಚರಣೆಯಂತಿತ್ತು. ನಂತರ, ಏಳನೆಯದಿನದಿಂದ, ಮೊದಲನೆಯ ದಿನಕ್ಕೆ ಬದಲಾವಣೆ ಹೊಂದಿದ್ದು ಆಶ್ಚರ್ಯವೆ. ಇದಕ್ಕೆ ಅವರ ಬಲವಾದ ನಿರ್ಣಯಗಳೇ ಕಾರಣವಾಗಿದ್ದವು, ಯೇಸುವನ್ನು ದೇವರು ವಾರದ ಮೊದಲನೆಯ ದಿನದಲ್ಲಿ ಎಬ್ಬಿಸಿದ ಸೂಚನೆಯು ಅದಾಗಿತ್ತು. ಆದ್ದರಿಂದ, ಆತನೇ "ಕರ್ತನು ಮತ್ತು ಕ್ರಿಸ್ತನು" ಎಂಬುದಾಗಿ ಸಾಭೀತುಪಡಿಸಿದರು (ಅಪೊಸ್ತಲರಕೃತ್ಯಗಳು 2:36; ರೋಮಾಪುರ 1:4). ಅದು ಕ್ರೈಸ್ತರ ನಂಬಿಕೆಯನ್ನು ಹಾಗು ಜೀವನವನ್ನು ನ್ಯಾಯಯುತವೆಂದು ನಿರ್ಣಯಿಸಿತು (ನೋಡಿ 1 ಕೊರಿಂಥ 15:14-17). ಯೇಸು ಕ್ರಿಸ್ತನ "ಯಜ್ಞದ ರಕ್ಷಣೆಯವರ"ವನ್ನು ತಿಳಿಯುವಲ್ಲ, ಆತನ ಪುನರುತ್ಥಾನವನ್ನು ನೆನಪು ಮಾಡುವುದು ಯೋಗ್ಯವಾಗಿದೆ. 1 ಕೊರಿಂಥ 11:23-26ರ ಪೌಲನ ವ್ಯಾಖ್ಯಾನದಲ್ಲಿ ಇದನ್ನು ಕಾಣುತ್ತೇವೆ. ಯೇಸು ಹಿಡಿಯಲ್ಪಟ್ಟ ರಾತ್ರಿಯಲ್ಲಿ, ತನ್ನ ಶಿಷ್ಯರಿಗೆ ನೀಡಿದ ಸಂಸ್ಕಾರದ ಕುರಿತು ನೆನಪುಮಾಡಿದನು, ಮತ್ತು ಅದರ ಉದ್ದೇಶವನ್ನು ತಿಳಿಸಿ: (1) ಕ್ರಿಸ್ತನು ನಮಗೆ ಮಾಡಿದನ್ನು ಜ್ಞಾಪಕ ಮಾಡಿಕೊಳ್ಳಲು ಮತ್ತು (2) "ಆತನು ಬರುವವರಗೆ ಆತನ ಮರಣವನ್ನು" ಸಾರಲು (ವಚನ 26; ಒತ್ತಿ ಹೇಳಿದ್ದು ನನ್ನದು) "ಆತನು ಬರುವವರೆಗೆ" ಅಂದರೆ ಯೇಸು ಸಾಮಾಧಿಯಲ್ಲೆ ಉಳಿಯಲಿಲ್ಲ ಎಂಬ ಅರ್ಥವೂ ಆಗಿದೆ, ನಮ್ಮ ಜೀವಿತದಲ್ಲಿ ಆತನು ಮಾಡಿರುವ ಕಾರ್ಯಗಳನ್ನು ಗಮನಿಸುವಾಗ, ಆತನು ತಿರುಗಿ ಬರುತ್ತಾನೆ ಎಂಬ ತತ್ವವನ್ನು, ನಮ್ಮ ಜೀವಿತದಲ್ಲಿ ಸಾಭೀತುಪಡಿಸಬೇಕು. [3]ಕೆಲವು ವಿಷಯಗಳನ್ನು ಸಭೆಗಳಲ್ಲಿ ಮಾಡಬೇಕೋ ಅಥವಾ ಮಾಡಬಾರದೋ ಎಂಬ ಪ್ರಶ್ನೆಯು ಇಲ್ಲಿ ಉದ್ಭವಿಸುತ್ತದೆ ಹೊಸ ಒಡಂಬಡಿಕೆಯ, ಹಾಡಿನ ಪುಸ್ತಕದ ಕುರಿತು ನೇರವಾಗಿ ಏನನ್ನೂ ಹೇಳಿರುವದಿಲ್ಲ, ಸಭೆಯಲ್ಲಿ ಅದು ಅಗತ್ಯವೇ? ಬಾಯಿಪಾಠದಿಂದ ಎಲ್ಲವನ್ನು ಹಾಡಲು ಸಾಧ್ಯವಿಲ್ಲ. ವಿಶುವಲ್‌ಗಳನ್ನು ಉಪಯೋಗಿಸಬಹುದೇ? - ಅಥವಾ ಕಾಗದದ ಮೇಲಿನ ಮುದ್ರಣ, ಪ್ರೊಜೆಕ್ಟರ್ ಹಾಗೂ ಕಂಪ್ಯೂಟರ್‌ಗಳನ್ನು ಉಪಯೋಗಿಸಬಹುದೇ? ಉತ್ತರವು ಹೌದೆಂದು, ಜನರು

ಹಾಡಬೇಕೆಂದು ದೇವರು ನಿಯಮಿಸಿದ್ದಾನೆ. [4]For example, the first definition of the verb "baptize" in the *Random House Webster's College Dictionary,* 2d ed. (1999) "ನೀರಿನಲ್ಲಿ ಮುಳುಗಿಸು ಅಥವಾ ಚಿಮುಕಿಸು ಅಥವಾ ಸುರಿ, ಎಂಬುದಾಗಿ ದೀಕ್ಷಾಸ್ನಾನ ಕ್ರೈಸ್ತರ ಹಕ್ಕಾಗಿದೆ." [5]C. G. Wilke and Wilibald Grimm, *A Greek-English Lexicon of the New Testament,* trans. and rev. Joseph H. Thayer (Edinburgh, Scotland: T. & T. Clark, 1901; reprint, Grand Rapids, Mich.: Baker Book House, 1977), 94. [6]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick William Danker (Chicago: University of Chicago Press, 2000), 164. [7]Ibid., 887, 903.